Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು.)

ಸಂಪುಟ 28 ಸಂಚಿಕೆ 166] ಗುರುವಾರ 22—3—45 [3 ಪೈ

ಮಾಂಡಲೀಪತನ

ವೈಸರಾಯರು ಲಂಡನ್ನಿಗೆ ಪ್ರಯಾಣಮಾಡಿದರು

ಮುಂಬೈ ಗೌರ್ನರರು ವೈಸರಾಯರಾದರು

ಅಮೇರಿಕಾದಲ್ಲಿ ಜೋಡುಗಳ ದೇಹ ಮತ್ತೆ ಕಮ್ಮಿಯಾಗಿದೆ

o o

ದೀರ್ಘಕಾಲ ಯುದ್ಧದಿಂದ ಬ್ರಿಟಿಷ್ ಜನರಿಗೆ ವಿಚಾರ ಮನಸ್ಸಾಗಿದೆ. ಬುದ್ಧಿಬ್ರಮಣೆ ಜನರಿಗೆ ಹೆಚ್ಚು ಹೆಚ್ಚಾಗಿ ಆಗುತ್ತಿದೆ.

o o

ಅಮೇರಿಕಾದಲ್ಲಿ 1939 ಕ್ಕೂ ಈಗಿರುವ ಇಕಂಟ್ಯಾಕ್ಸಿನ ದರಕ್ಕೂ ಶೇ || 34 ರಷ್ಟು ಹೆಚ್ಚಿದೆ.

o o

ಭಾರತದಲ್ಲಿ 1090 ಸ್ತ್ರೀ ಸೆನ್ಸಾರುಗಳು ಇರುವುದಾಗಿ ಕೇಂದ್ರ ಸಭೆಯಲ್ಲಿ ತಿಳಿಸಲಾಯಿತು.

o o

ಬೆಂಗಳೂರು ಪೌರ ಸಭಾ ನೌಕರರಿಗೆ ಎಸೆನ್ಸಿಯಲ್ ಸರ್ವಿಸ್ ಆರ್ಡಿ ಅನ್ವಯಿಸಲಾಗುವುದು.

o o

ಮದರಾಸಿನ 1945-46 ಬಜೆಟ್ ಹೊರಬಿದ್ದಿತು. ಒಟ್ಟು ಉಳಿತಾಯ 80 ಲಕ್ಷ ರೂಪಾಯಿ. ಗತಸಾಲಿನಲ್ಲಿ ಶೇಂದಿಯಲ್ಲಿ 5 ಮಿ ಕೋಟಿ ರೂ. ಉತ್ಪತ್ತಿಯಾಯಿತು.

o

ಯುದ್ಧಾನಂತರ ಬ್ರಿಟನ್ನಿಗೆ ಎಲ್ಲಾ ಪಂಗಡಗಳ ನ್ಯಾಷನಲ್ ಸರಕಾರವಾಗಬೇಕೆಂದು ಬ್ರಿಟಿಷ್ ಕಮ್ಯೂನಿಸ್ಟ್ ಪಾರ್ಟಿಯವರು ಒತ್ತಾಯಪಡಿಸುತ್ತಿದ್ದಾರೆ.

ಮಾಂಡಲೆಯು ಮಿತ್ರರ ವಶವಾಯಿತು. ಜಪಾನರ ಪ್ರತಿಭಟನೆ ತಣ್ಣಗಾಯಿತು. ಎಲ್ಲೆಲ್ಲಾ ಜಪಾನೀಯರನ್ನು ಅಟ್ಟಿಕೊಂಡುಹೋಗುವ ಕಾರ್ಯ ನಡೆಯುತ್ತಿದೆ. ಇನ್ನು ದಕ್ಷಿಣಕ್ಕೆ 28 ಮೈಲಿಗಳಲ್ಲಿ ರಂಗೂನ್

o o

ಜರ್ಮನಿಯ ಮೇಲೆ ಬಹು ಹೆಚ್ಚಾಗಿ ಬಾಂಬು ಹಾಕಲಾಯಿತು.

o o

ಮದ್ರಾಸಿನಲ್ಲಿ ಒಬ್ಬ ಗಡಿಯಾರದ ವರ್ತಕನು ಹೆಚ್ಚು ಬೆಲೆಗೆ ಗಡಿಯಾರ ಮಾರಿದ್ದಕ್ಕಾಗಿ ರೂ. 11700 ಜುಲ್ಮಾನೆ ವಿಧಿಸಲಾಗಿದೆ.

o o

ಬೆಂಗಳೂರಿನಲ್ಲಿ ಡಿಕ್ಲೇರ್ಡ್ ಹೋಲ್ಡರುಗಳು 3 ತಿಂಗಳಿಗೊಂದಾವರ್ತಿ ತಪ್ಪಲ್ಲಿರತಕ್ಕ ಆಹಾರ ಪದಾರ್ಥಗಳ ಬಗ್ಗೆ ಡಿಕ್ಲರೇಷನ್ ಕೊಡುವುದನ್ನು ಮಾನ್ಯ ಮಾಡಲಾಗಿದೆ.

o o

ಹೀರೋ ಆಫ್ ದಿ ಸಾವಯಟ್ ಯೂನಿಯನ್ ಪ್ರಶಸ್ತಿಯು 7744 ಮಂದಿಗೆ ಲಭಿಸಿದೆ. ಇವರಲ್ಲಿ 49 ಮಂದಿ ಮಹಿಳೆಯರು.

o o

ಹೊಸಕೋಟೆ ತಾ || ಬೆಟಗಾನಹಳ್ಳಿಯಲ್ಲಿ ಬೆಂಕಿತಗಲಿ 12 ವಾಸದ ಗುಡಿಸಲುಗಳೂ, 1 ಹಸು. 21 ಮೇಕೆಗಳು, 33 ಪಲ್ಲಂಗಾಗಿ, 23 ಹುಲ್ಲಿನ ಮನೆ ಸೆಟ್ಟು ಬೂದಿಯಾದವು. ಕಾರಣ ಗೊತ್ತಿಲ್ಲ.

ಲಕ್ಷ್ಮೀಕಾಂತನ

ಇಂದೂ ಸೇವಕ ಪತ್ರಿಕೆಯಿಂದ

.... ಎತ್ತಿ ಬರೆದುದು ....

o

ಮಧುರೆ ದೇವಸ್ಥಾನದ ರಾತ್ರಿ ಪೂಜೆಯೆಲ್ಲಾ ಮುಗಿಯಿತು. ಜಾಕಂರೆಲ್ಲ ಅವರವರ ಮನೆಗಳಿಗೆ ಸೇರಿಕೊಂಡರು, 3—4 ಒಸ್ಸಗಳಲ್ಲಿ ಯಾತ್ರಾರ್ಥಿಗಳು ಒಂದರು. ಸೇವಕಾರರು 10 ರೂ. ತೆಗೆದುಕೊಂಡು ಅರ್ಚಕರಿಂದ ಬೀಗ ತೆಗಿಸಿ ಯಾತ್ರಾರ್ಥಿಗಳಿಗೆ ದೇವರ ಸೇವೆ ಮಾಡಿಸಿದರು. ಈ ಗುಟ್ಟು ಮಾರನೇ ದಿನ ಮೇಲಧಿಕಾರಿಗಳಿಗೆ ತಿಳಿದು ಚಿಕ್ಕ ನೌಕರರಿಗೆಲ್ಲಾ ಜುಲ್ಮಾನೆ ಸಸ್ಪೆಂಡ್ ಆಯಿತು. ಸೇವಕಾರರ ಗೋಜಿಗೆ ಯಾವ ಅಧಿಕಾರಿಯೂ ಹೋಗದಿರಲು ಕಾರಣ ವೇನು ? (ಬಸ್ ನಂಬರು, ಜಿಲ್ಲರೆ ನೌಕರರ ಹೆಸರು ಇಲ್ಲಿ ಬಿಟ್ಟಿರುತ್ತೇವೆ.)

ಇಂಗ್ಲೆಂಡಿನಲ್ಲಿ ಪಾದ್ರಿಗಳ ಸಮ್ಮೇಳನ ನಡೆಯಿತು. ಅಲ್ಲಿ ಕಾಲನಿಗಳಲ್ಲಿ ವರ್ಣಭೇದ ಮಾಡಬಾರದೆಂದು ತಂತಾವು ಆಯಿತು.

o o

ಗತ ಸಾಲಿನಲ್ಲಿ ಅಮೇರಿಕಕ್ಕೆ ಪ್ರಜೆಯಾಗಲು ಅನುಮತಿ ದೊರೆತವರು ಮೇ 20 ರಲ್ಲಿ ' ನಾನು ಒಬ್ಬ ಅಮೇರಿಕಾ ದೇಶದವನು ' ಎಂಬ ದಿನಾಚರಣೆ ಮಾಡಲು ಪ್ರೆಸಿಡೆಂಟರು ಅನುಮತಿ ಕೊಟ್ಟರು.



ಎಲ್. ಜೆ. ಹಾಲ್, ಸಹಾಫ್ ಅಂಗಡಿ ರಸ್ತೆ ಬೀಡಿ, ಮೈಸೂರು.

ಜಾತೀಯ ಪ್ರಶ್ನೆ

ಇಂಡಿಯನ್ ರಿವ್ಯೂ ಪತ್ರಿಕೆಯಲ್ಲಿ ಸರ್ ಮಿರ್ಜಾ ಇಸ್ಮಾಯಿಲರ ಜೀವಿಕೆ

o

ಹಿಂದು ಮುಸ್ಲಿಮ್ ಸಮಸ್ಯೆಯು ಇಂದಿನ ನಮ್ಮ ಕಲಂಕಭರಿತ ತೊಂದರೆಯಾಗಿರುವುದು. ಬಗೆಹರಿಸಲಾಗದ ಸಮಸ್ಯೆಯು ಇದೆಂದು ನನಗೆ ಅನಿಸುವುದಿಲ್ಲ. ಕೆಲವೊಮ್ಮೆ ಈ ಕುರಿತು ನಮ್ಮಲ್ಲಿ ಅಂಜಿಕೆಯು ಉತ್ಪನ್ನವಾಗುವುದಾದರೂ ಈ ಅಂಜಿಕೆಯು ನಿರಾಧಾರವಾದದ್ದಿದೆ ಎಂದು ನಾನು ನನ್ನ ಇಂದಿನವರೆಗಿನ ಅನುಭವದಿಂದ ಹೇಳಲು ಶಕ್ತನಿರುವೆ. ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ಐಕ್ಯವನ್ನು ಅಂತ್ಯದಲ್ಲಿ ಕಾಲವೂ ಜಾಗತಿಕ ಪರಿಸ್ಥಿತಿಯೂ ನಿಷ್ಪರ್ಷಿಸುವವು ಮತ್ತು ನಾಧಿಸುವವು.

ಬ್ರಿಟಿಷರ ಹಿಂದುಸ್ಥಾನದ ರಾಜ್ಯಾಡಳಿತದ ಮೊದಲಿನಿಗಳಿಗೂ ಇಂದಿಗೂ ಅಜಗಜಾಂತರ ವ್ಯತ್ಯಾಸವಿದೆ ಎಂಬುದನ್ನು ನಾವು ಮರೆಯಬಾರದು. ಜಗತ್ತಿನ ಎಲ್ಲೆಡೆಗಳಲ್ಲಿಯೂ ಪರಿಸ್ಥಿತಿಗಳು ರೂಪಾಂತರ ಹೊಂದಿದೆ. ಮನುಷ್ಯರ ಭಾವನೆಗಳಲ್ಲಿ ಕೂಡ ಹೆಚ್ಚಿನ ಮಾರ್ಪಾಟು ಆಗಿರುವುದು. ಋತುಗಳು ತಿರುಗುವಂತೆ ನಮ್ಮಲ್ಲಾದರೂ ಪರಸ್ಪರ ವ್ಯವಸ್ಥಾಪನೆ ಯಾಗುವುದು ಅಪರಿಹಾರ್ಯವಿದೆ. ಇಂತಹ ಜಗತ್ತಿನಲ್ಲಿ ನಾವು ಬದುಕಿ ಬಾಳಬೇಕೆಂದು ಆಶಿಸುವುದಾದರೆ ಪರಸ್ಪರ ವ್ಯವಸ್ಥಾಪನೆಯನ್ನು ಮಾಡಿಕೊಳ್ಳಲಿಕ್ಕೇ ಬೇಕು. ಆಂಗ್ಲ ವಿದ್ಯಾಭ್ಯಾಸವು ಒಲವೇಬೇಕಾಗಿಲ್ಲ. ಆಂಗ್ಲಭಾಷೆಯು ಇಂದು ಜಗತ್ತಿನ ಭಾಷೆಯಾಗುತ್ತಲಿದೆ.

ನಮ್ಮ ರಾಷ್ಟ್ರದ ಯುವಕರಿಗೆ ಕ್ರಮವಾದ ವಿದ್ಯಾವ್ಯಾಸಂಗವು ಸಿಗುವಂತೆ ನೋಡುವುದು ನಮ್ಮ ಕರ್ತವ್ಯವಿದೆ ಈ ವಿದ್ಯಾಭ್ಯಾಸದ ಪರಿಣಾಮದಿಂದ ಅವರು ತಾತ್ಪರ್ಯ ಹಿಂದೀ ನಾಗರಿಕರಾಗಬೇಕು. ಅವರು ಈ ವಿದ್ಯಾರ್ಜನೆಯಿಂದಾಗಿ ಎಲ್ಲ ಪ್ರಶ್ನೆಗಳನ್ನೂ ಹಿಂದಾದ ಮಾತೃಭೂಮಿಯ ದೃಷ್ಟಿಯಿಂದ ನೋಡುವಂತಾಗಬೇಕಲ್ಲದೆ ತಮ್ಮ ಜಾತೀಯ ಅಥವಾ ಪಂಗಡದ ದೃಷ್ಟಿಯಿಂದ ನೋಡುವಂತಾಗಬಾರದು. ಸಾರ್ವಜನಿಕ ವಿದ್ಯಾರ್ಥಿಭವನಗಳು ಮತ್ತು ಸಮಾನವಾದ ರಾಷ್ಟ್ರೀಯ ಅಕಾಂಕ್ಷೆಗಳು ಎಲ್ಲ ಪಂಗಡಗಳ ಯುವಕರನ್ನು ಒಂದುಗೂಡಿಸುವವು.

ಜಾತೀಯನ್ನು ತಿರಸ್ಕರಿಸಬೇಕಾದು ಇಲ್ಲ. ಆದರೆ ಸಾಮಾಜಿಕ ಹಾಗೂ ರಾಷ್ಟ್ರೀಯ ಜೀವನದಲ್ಲಿ ಜಾತೀಯ ಪ್ರಶ್ನೆಯು ಪ್ರಮುಖ ಸ್ಥಾನವನ್ನು ಆ ಕ್ರಮಿಸಬಾರದು. ರಾಷ್ಟ್ರೀಯತ್ವವು ಅದನ್ನು ಹಿಂಸಿಸೀತು.

ಇಂದು ಜಾತೀಯ ವಾದವು ಅಂ ಗಳ್ಲಾ ವಿದ್ಯಾಭ್ಯಾಸವನ್ನು ಹೊಂದಿದ ಕೆ ಲವರಲ್ಲಿ ಮಾತ್ರ ಇರುವುದಲ್ಲದೆ ಜನ ಸಾಮಾನ್ಯರಲ್ಲಿರುವುದಿಲ್ಲ. ಇದು ಸೋ ಚಿಗವಷ್ಟೆ. ಈ ವಿದ್ಯಾಭ್ಯಾಸವನ್ನು ಹೊಂದಿದವರು ಹಿಂದಿನದನ್ನು ಪುನರು ತ್ಥಾನ ಮಾಡಲು ಯತ್ನಿಸುತ್ತಿರುವರು. ಇದರಿಂದಾಗಿ ತಮ್ಮನ್ನೂ ತಮ್ಮೊಂದಿಗೆ ಇತರರನ್ನೂ ಕಸ್ಪಪರಂಪರೆಗಳಿಗೆ ಗುರಿ ಪಡಿಸುತ್ತಿರುವರು. (ಹು. ಗೆ.)

ಕರ್ನಲ್ ಎಸ್. ಎಲ್. ಭಾಟಿಯಾ ವೈವರು ಮುಂಬೈ ವೈದ್ಯ ಇಲಾಖೆಯ ಡಿ || ಡೈರೆಕ್ಟರ್ ಜನರಲ್ಲರು. ಇವರು ಈಗ ಅಮೇರಿಕಾದಲ್ಲಿ ಪ್ರವಾಸ ಮಾ ಡುತ್ತಾ ಅಲ್ಲಿಯ ವಿಶ್ವವಿದ್ಯಾನಿಲಯ ಗಳಿಗೆ ಭೇಟಿ ಕೊಡುತ್ತಿರುವರು-

ಸೆನೇಟ್ ಮಿಾಟಿಂಗ್

ಸೆನೇಟ್ ಮಿಾಟಿಂಗು ನಿನ್ನೇ ದಿವಸ ನಡೆಯಿತು. ಶ್ರೀಮನ್ಮಹಾರಾಜರವರಿಗೆ ಬಿ. ಸಿ. ಎಸ್. ಐ. ಪಿರುದು ಬಂದಿದ್ದ ಕ್ಕಾಗಿ ಅಭಿನಂದಿಸಿದರು ಡಾ || ಪುಟ್ಟ ಯ್ಯ, ಶ್ರೀ ಸಂಪತ್ಕುಮಾರ್ಡಗಳ ನಿಧನ ಕ್ಕಾಗಿ ಸಂತಾಪ ಸೂಚಿಸಿದರು. ಬೆಂ ಗಳೂರು ಇಂಜನೀರಿಂಗ್ ಕಾಲೇಜಿನಲ್ಲಿ ಇದೇ ಜೂಲೈ ತಿಂಗಳಿಂದ ಕೆಮಿಕಲ್ ಇಂಜಿನೀರಿಂಗ್ ಶಾಖೆಯನ್ನು ಪ್ರಾರಂ ಭ ಮಾಡಲು ತೀರ್ಮಾನವಾಯಿತು. ಆರ್ಕಿಟೆಕ್ಟರ್ ಡಿಗ್ರಿ ತರಗತಿ ತೆರೆಯುವ ಯೋಜನೆ ಇರುವುದೆಂದು ಹೇಳಲಾಯಿ ತು. ವಿದ್ಯಾರ್ಥಿನಿಯರಿಗೆ ಪೂರ್ತಾ ಫೀಜು ವಜಾಮಾಡಲಾಗಿದೆ. ಮೆಡಿಕ ಲ್ ಮತ್ತು ಇಂಜನೀರಿಂಗ್ ಕಾಲೇಜು ಗಳಿಗೆ ಎಷ್ಟು ಮಂದಿ ಸೇರಿಸಬೇಕೆನ್ನುವ ವಿಷಯ ಪರ್ಯಾಲೋಚನೆಯಲ್ಲಿದೆ. ವ್ಯವಸಾಯದ ಡಿಗ್ರಿ ಕೊಡಲು ಯೋಚನೆ ಯಾಗುತ್ತಿದೆ. ಇದೇ ಏಪ್ರಿಲ್ಲಿನಿಂದ ವಿಮಾನ ಶಿಕ್ಷಣ ಕೊಡಲು ಏರ್ಪಾಡಾ ಗುವುದು.

ರಕ್ತ ವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯವೆ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ ಅಮೋಘ 2 ನೇ ವಾರ

At Ranjit ❁ Pagli Duniya

ರಣಜಿತ್ ಟಾಕೀಸಿನಲ್ಲಿ

ಪಗಲಿ ದುನಿಯಾ

(ಹಿಂದಿ)

ನುಮ್ತಾಜ್ ಶಾಂತಿ ಮೋತಿಲಾಲ್ ಷೇಕ್‌ಮುಕ್ತಾರ್

ಪಾತ್ರವಹಿಸಿರುವರು

ಪ್ರತಿ ದಿನ 3 ಆಟಗಳು

AT OPERA — DOST

ಅಪೆರಾ ಟಾಕೀಸ್

ಮೋತೀಲಾಲ್, ನೂರ್‌ಜಹಾ ಪಾತ್ರವಹಿಸಿರುವ

ದೋಸ್ತ್ (ಹಿಂದಿ)

— NEXT CHANGE —

Air Raid Wardens

With Stan Laurel & Oliver Hardy

TALK-A-TONE

(The Pioneer Film-mag of S. India)

From 1-3-45 Re. 1 per copy.

Local Agent—D. Mahadev

Opera Talkies, Mysore

Good Coffee

Sastry's Coffee Rooms

Chamarajapuram, Mysore

For Good Printing—

L. N. Press

Sritampet MYSORE

ಉತ್ತರ ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇ ಜು 1 ಆಣೆ. ಮುಂಗಡ ಕಳುಹಿಸಬೇಕು. ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿ ಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ಕ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂ ದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿ ಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯೂಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟೆಲ್ ಉಪಯೋಗಕ್ಕೆ ಉಪಯುಕ್ತವಾದುದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ವಲ್ಲಭದಾಸ್ ತೇಜ್ ಪಾಲ್ ಹಿಂಗು, ಕೇಸರಿ, ಪಚ್ಚಕರ್ಪೂರ ವರ್ತಕರು

14. ಗೋವಿಂದಪ್ಪ ನಾಯಿಕ್ ಬೀದಿ ಬಿ.ಟಿ. ಮದರಾಸ್.

Edited, Printed and published by M. S. Krishna Rao, at the Satyavadi Press, Chamaraja Agrahar, Mysore